<u>ದಿಃ 11.03.2022 ರಂದು ಪಿಡಬ್ಲ್ಯೂ-26 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎನ್.ಟಿ.ಆರ್. ವಕೀಲರಿಂದಃ</u>**

81. ನಿಪಿ–2 ರಲ್ಲಿ ತೋರಿಸಿದ ಆಸ್ತಿಯ ಬೆಲೆಯನ್ನು ಪಂಚರು ಮತ್ತು ಆರೋಪಿ ಹೇಳಿಕೆ ಮೇರೆಗೆ ನಿಗದಿಪಡಿಸಿದ್ದೆನು. ಅಸಾ–2 ಮತ್ತು 3 ಒಬ್ಬ ಬಡಗಿ ಮತ್ತು ಅಕ್ಕಸಾಲಿಗ ಬೆಳ್ಳಿ ಬಂಗಾರದ ಬೆಲೆಯನ್ನು ಮತ್ತು ಮನೆಯಲ್ಲಿದ್ದ ಪೀಠೋಪಕರಣದ ಬೆಲೆಯನ್ನು ನಿಗದಿಪಡಿಸಿದರು. ಪಂಚನಾಮೆಯಲ್ಲಿ ಆ ಮನೆಯ ಬೆಲೆಯನ್ನು ಆರೋಪಿಯು ಹೇಳಿದ್ದರು ಎಂದು ಬರೆದಿದ್ದೇನೆ. ಡಿವೈ.ಎಸ್.ಪಿ. ಬಾರ್ಕೇರ್ ರವರು ಫಿರ್ಯಾದಿ ಆಗಿದ್ದಾರೆ. ಅಸಾ–1 ರಿಂದ 3 ಮತ್ತು ದೋಸಾ–3 ಯಾವುದೇ ಬೆಲೆಯನ್ನು ನಿಗದಿಪಡಿಸಿರಲಿಲ್ಲ ಎನ್ನುವುದು ಸರಿಯಲ್ಲ. ಅಕ್ಕಸಾಲಿಗರು ತಮ್ಮ ಜೊತೆಗೆ ತೂಕದ ಯಂತ್ರವನ್ನು ಹಾಗೂ ಚಿನ್ನ ಬೆಳ್ಳಿ ಪರೀಕ್ಷೆ ಮಾಡುವ ವಸ್ತುವನ್ನು ತಂದಿದ್ದರು. ಅಕ್ಕಸಾಲಿಗರು ಕ್ಯಾರೆಟನ್ನು ನಿರ್ಧರಿಸುವ ಮೆಶಿನ್ ತಂದಿರಲಿಲ್ಲ. ಅವರು ಚಿನ್ನ ಮತ್ತು ಮುತ್ತಿನ ಆಭರಣವನ್ನು ಸೇರಿಸಿ ತೂಕ ಮಾಡಿ, ಮುತ್ತಿನ ತೂಕವನ್ನು ಅದರಲ್ಲಿ ಕಳೆದಿದ್ದರು. ನಾನು 2 ನೇ ಆರೋಪಿಯ ಎ.ಪಿ.ಆರ್. ಪರಿಶೀಲನೆ ಮಾಡಿದ್ದೆನು. ಅದರಲ್ಲಿ 350 ಗ್ರಾಂ ಚಿನ್ನವನ್ನು 2 ನೇ ಆರೋಪಿ ತೋರಿಸಿದ್ದರು ಎಂದರೆ ನಿಜ, ಆದರೆ ಅದರ ಮೂಲವನ್ನು ಎ.ಪಿ.ಆರ್.ನಲ್ಲಿ ತೋರಿಸಿರಲಿಲ್ಲ ಮತ್ತು ನಾವು ನೀಡಿದ ಸ್ಟೇಟ್ಮೆಂಟ್‌ನಲ್ಲೂ ಸಹ ಮೂಲವನ್ನು ತೋರಿಸಿರಲಿಲ್ಲ.

82. ಆರೋಪಿತರು ಬಡ್ತಿ ಬಂದ ಸಮಯದಲ್ಲಿ ಮತ್ತು ಕುಟುಂಬದ ಕಾರ್ಯಕ್ರಮಗಳಲ್ಲಿ ಬೆಳ್ಳಿ ಬಂಗಾರದ ಆಭರಣಗಳು ಬಂದಿರುತ್ತವೆ ಎಂದು ಸಮಜಾಯಿಷಿ ನೀಡಿದರೂ ಸಹ ಅದನ್ನು ನಾನು ಪರಿಗಣಿಸಲಿಲ್ಲ ಎಂದರೆ ಅವರು ಯಾವ ಯಾವ ಕಾರ್ಯಕ್ರಮದಲ್ಲಿ ಯಾರು ಯಾರು ಕೊಟ್ಟಿದ್ದರು ಎಂದು, ಅದರ

ಮೂಲ ಏನು ಎಂದು ವಿವರಣೆ ಕೊಡದೇ ಇದ್ದ ಕಾರಣ ಅದನ್ನು ಪರಿಗಣಿಸಲಿಲ್ಲ. 2003–04 ಮತ್ತು 2005–06 ರ ಎ.ಪಿ.ಆರ್.ನಲ್ಲಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಬಗ್ಗೆ ಆರೋಪಿತರು ತೋರಿಸಿದ್ದು, ಅದನ್ನು ನಾನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದರೆ ಅದನ್ನು ಅವರು ಯಾವ ಮೂಲದಿಂದ ಸದರಿ ಆಭರಣ ಬಂದಿತ್ತು ಎಂದು ದಾಖಲಾತಿಗಳನ್ನು ತೋರಿಸದೇ ಇದ್ದ ಕಾರಣ ನಾನು ಪರಿಗಣನೆಗೆ ತೆಗೆದುಕೊಂಡಿಲ್ಲ. ನಾನು ಬೆಳ್ಳಿ ಬಂಗಾರದ ಆಭರಣದ ಬೆಲೆಯನ್ನು ದಾಳಿ ಮಾಡಿದ ವರ್ಷದಲ್ಲಿದ್ದ ಬೆಲೆಯನ್ನು ನಿಗದಿಪಡಿಸಿದ್ದೆ ಎಂದರೆ ಆರೋಪಿತರು ಯಾವ ಯಾವ ವರ್ಷದಲ್ಲಿ ಅವುಗಳನ್ನು ಅರ್ಜನೆ ಮಾಡಿದ್ದರು ಎಂದು ಹೇಳಿದ್ದ ವರ್ಷಕ್ಕೆ ಬೆಲೆ ನಿಗದಿಪಡಿಸಿದ್ದೆ.

83. ಗೃಹೋಪಕರಣಗಳ ಬಗ್ಗೆ ಆರೋಪಿತರು ಕೆಲವು ಬಿಲ್ಲುಗಳನ್ನು ಹಾಜರುಪಡಿಸಿದ್ದರು. ಕೆಲವು ವಸ್ತುಗಳನ್ನು ಯಾವ ವರ್ಷ ಖರೀದಿ ಮಾಡಿದ್ದರು ಎಂಬುದನ್ನು ಆರೋಪಿತರೇ ಹೇಳಿದ್ದರು. ಆರೋಪಿತರು ಸದರಿ ವಿಷಯವನ್ನು ಹೇಳಿದ್ದರು ಎಂದು ನಾನು ಪಂಚನಾಮೆಯನ್ನು ಬರೆದಿದ್ದೇನೆ ಮತ್ತು ಅವರ ಸಹಿಯನ್ನು ಪಡೆದಿದ್ದೇನೆ. ಗೃಹೋಪಕರಣಗಳ ಬೆಲೆಯನ್ನು ನಿಗದಿಪಡಿಸಿದವರು ಪರಿಣಿತಿ ಹೊಂದಿದ ವ್ಯಕ್ತಿಗಳಲ್ಲ ಎಂದರೆ ಆರೋಪಿತರೇ ಅವುಗಳ ಬೆಲೆಗಳನ್ನು ಹೇಳಿದ್ದರಿಂದ ಅವರು ಪರಿಣಿತಿ ಹೊಂದಿದ ವ್ಯಕ್ತಿಗಳಲ್ಲ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾನೂನಿನ ಪ್ರಕಾರ ವಿಶೇಷ ತಜ್ಞರು ಮಾತ್ರ ಆ ಬೆಲೆಯನ್ನು ನಿಗದಿಪಡಿಸಬೇಕು ಎಂದು ಕೆಲವು ವಸ್ತುಗಳನ್ನು ವಿಶೇಷ ತಜ್ಞರು ನಿಗದಿಪಡಿಸಬೇಕಾಗುತ್ತದೆ, ಎಲ್ಲಾ ವಸ್ತುಗಳನ್ನಲ್ಲ.

84. ಆರೋಪಿತರು ಮದುವೆಯಲ್ಲಿ, ಮಕ್ಕಳ ನಾಮಕರಣದ ವೇಳೆ, ಬಡ್ತಿ ಬಂದ ವೇಳೆ ಹಾಗೂ ವರ್ಗಾವಣೆಯಾದ ವೇಳೆ ಬಂದಂತಹ ಕಾಣಿಕೆಗಳು ಎಂದು ಹೇಳಿದರೂ ಸಹ ನಾನು ಅದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದರೆ ಅದಕ್ಕೆ ಸೂಕ್ತವಾದ

ದಾಖಲೆಗಳನ್ನು ಒದಗಿಸದೇ ಇದ್ದ ಕಾರಣ ನಾನು ಅವುಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಗೃಹೋಪಕರಣಗಳ ಬಗ್ಗೆ ಆರೋಪಿತರು ಯಾವುದೇ ಬೆಲೆ ಹೇಳಿಲ್ಲ ಎನ್ನುವುದು ಹಾಗೂ ನಾನು ಹೆಚ್ಚಿನ ಮಟ್ಟದಲ್ಲಿ ಅವುಗಳ ಬೆಲೆಯನ್ನು ತೆಗೆದುಕೊಂಡಿದ್ದೆ ಎನ್ನುವುದು ಸರಿಯಲ್ಲ. ಎಲ್ಲಾ ಗೃಹೋಪಯೋಗಿ ವಸ್ತುಗಳ ಬೆಲೆ ರೂ.1,60,2510/– ಎಂದರೆ ಸರಿಯಲ್ಲ. ಉದ್ದೇಶಪೂರ್ವಕಾಗಿ ಅವುಗಳ ಬೆಲೆಯನ್ನು ರೂ.8,61,221/– ಎಂದು ತೋರಿಸಿದ್ದೇನೆ ಎನ್ನುವುದು ಸರಿಯಲ್ಲ.

85. ಹಿರಿಯೂರು ತಾಲ್ಲೂಕು ಹೂವಿನಹೊಳೆ ಗ್ರಾಮದ ಸರ್ವೆ ನಂ.62/2 ಇದು ಡಿ.ರಾಮಣ್ಣ ಮತ್ತು ಡಿ.ವೀರಣ್ಣ ಎಂಬುವವರಿಗೆ ಸೇರಿದ್ದು ಎಂದು ಕಂಡು ಬಂದಿತ್ತು ಎಂದರೆ ನಿಜ. ಅದು ಆರೋಪಿತರು ಆ ವ್ಯಕ್ತಿಗಳ ಹೆಸರಿನಲ್ಲಿ ಖರೀದಿಸಿದ್ದು ಎಂದು ತೋರಿಸಲು ನಾನು ದಾಖಲೆ ಸಂಗ್ರಹಿಸಿ ಹಾಜರುಪಡಿಸಿದ್ದೇನೆ. ಆ ಸ್ವತ್ತನ್ನು ಖರೀದಿಸಲು 1ನೇ ಆರೋಪಿ ಹಣ ಕೊಟ್ಟಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಆ ಜಮೀನಿನ ಕ್ರಯ ಪತ್ರ ಪರಿಶೀಲನೆ ಮಾಡಿದ್ದೇನೆ. ಕ್ರಯ ಪತ್ರದಲ್ಲಿ 1ನೇ ಆರೋಪಿ ಡಿ.ರಾಜಣ್ಣ ಆ ಸ್ವತ್ತಿನ ಕ್ರಯದ ಮೊತ್ತವನ್ನು ಕೊಟ್ಟಿದ್ದರು ಎಂದು ನಮೂದಿಸಿಲ್ಲ ಎಂದರೆ ನಿಜ. ಅದು ಬೇನಾಮಿ ಆಸ್ತಿಯಲ್ಲ ಎನ್ನುವುದು ಸರಿಯಲ್ಲ. ಡಿ.ರಾಮಣ್ಣ ಮತ್ತು ಡಿ.ವೀರಣ್ಣ ಇವರೇ ಆ ಸ್ವತ್ತನ್ನು ಖರೀದಿಸಿದ್ದಾರೆ ಎಂದು ಗೊತ್ತಾಗಿದ್ದರೂ ಸಹ 1ನೇ ಆರೋಪಿ ಬೇನಾಮಿ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

86. ಆ ಜಮೀನಿಗೆ ಸಂಬಂಧಿಸಿದಂತೆ 1ನೇ ಆರೋಪಿ ಕ್ರಯದ ಮೊತ್ತವಾದ ರೂ.6,21,082/– ಗಳನ್ನು ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಡಿ.ರಾಮಣ್ಣ ಮತ್ತು ಡಿ.ವೀರಣ್ಣ ಇವರೇ ಆ ಮೊತ್ತವನ್ನು ಪಾವತಿ ಮಾಡಿ ಆ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಅವರು ಬಿ.ಪಿ.ಎಲ್.

ಕಾರ್ಯದಾರರಾಗಿರುತ್ತಾರೆ. ಆ ಮೊತ್ತವನ್ನು 1ನೇ ಆರೋಪಿ ಕೊಟ್ಟಿದ್ದರು ಎಂದು ತೋರಿಸಲು ದಾಖಲೆ ಸಂಗ್ರಹಿಸಿದ್ದೇನೆ. ಹೌಸ್ ಸೈಟಿನ ನೊಂದಣಿ ಮೊತ್ತವನ್ನು ಯಾರು ಕೊಟ್ಟಿದ್ದರು ಎಂದು ನಾನು ಪರಿಶೀಲನೆ ಮಾಡಿದ್ದೇನೆ. 1ನೇ ಆರೋಪಿ ಆ ನೊಂದಣಿ ಮೊತ್ತವನ್ನು ಕೊಟ್ಟಿದ್ದರು.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿತ್ರದುರ್ಗ.